# ಪ್ರತಿಕ್ರಿಯೆ




## ಸರಳ ನಿರೂಪಣೆ, ನೈಜ ಚಿತ್ರಣ

ವಸುಮತಿ ಉಡುಪ ಅವರ ಧಾರಾವಾಹಿ 'ಪ್ರಾಪ್ತಿ' ಒಂಬತ್ತು ಕಂತುಗಳಲ್ಲಿ ಧಾರೆಯಾಗಿ ಹರಿದು ಬಂದು ಮನಸ್ಸಿಗೆ ಆಪ್ತವಾಯಿತು. ಸರಳ ನಿರೂಪಣೆ, ಮನುಷ್ಯ ಸ್ವಭಾವದ ನೈಜ ಚಿತ್ರಣ ಮನಮುಟ್ಟಿತು. ಧಾರಾವಾಹಿಯಲ್ಲಿ ಬರುವ ಪಾತ್ರಗಳು ಹಾಗೂ ಸನ್ನಿವೇಶಗಳು ನಮ್ಮ ಸುತ್ತಮುತ್ತ ಘಟಿಸಿದಂತಿದೆ. ಲೇಖಕಿ ಹಾಗೂ ಸುಧಾಗೂ ಧನ್ಯವಾದಗಳು.

—ವಸುಧಾ ಜೈಶಂಕರ್, ಬೆಂಗಳೂರು

### ಸಹಜ ಸುಂದರ ಕಥನ

ಸಹಜವಾಗಿ, ಸೊಗಸಾಗಿ ಮೂಡಿರುವ ಸುಂದರ ಧಾರಾವಾಹಿ ಆಪ್ತವೆನಿಸಿತು. ಅಭಿನಂದನೆಗಳು.

—ಕೆ.ವಿ.ರಾಜಲಕ್ಷ್ಮಿ, ಬೆಂಗಳೂರು

### ಸಂತೋಷ ಕೊಟ್ಟ ಸಂಧ್ಯಾಕಾಲದ ನೆಮ್ಮದಿ

ಧಾರಾವಾಹಿ ಇನ್ನೂ ಮೊನ್ನೆ ಮೊನ್ನೆಯಷ್ಟೇ ಪ್ರಾರಂಭವಾದಂತಿತ್ತು, ಇಷ್ಟು ಬೇಗ ಮುಕ್ತಾಯವಾಗಿದ್ದು ಬೇಸರವೆನಿಸಿತು. ನಮಗೆ ಜನ್ಮ ಕೊಟ್ಟ ತಾಯಿ ತಂದೆಯ ಋಣ ತೀರಿಸಲು ಸಾಧ್ಯವಿಲ್ಲ; ಭಾಮಳಿಗೆ ತನ್ನ ಅಪ್ಪನ ಸಂಧ್ಯಾಕಾಲದಲ್ಲಿನ ಜೀವನ ಚೇತೋಹಾರಿ ಹಾಗೂ ನೆಮ್ಮದಿಗೆ ಎಡೆ ಮಾಡಿಕೊಡಲು ಋಣ 'ಪ್ರಾಪ್ತಿ' ಆಗಿದ್ದು ಸಂತೋಷವೆನಿಸಿತು. ಈ ಧಾರಾವಾಹಿಯಲ್ಲಿನ ಪ್ರತಿಯೊಂದು ಪಾತ್ರವೂ ವಾಸ್ತವಿಕತೆಗೆ ಹತ್ತಿರವಾಗಿತ್ತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

### ಮುಗಿದೇ ಹೋಯಿತೆ?

ಕಗ್ಗದ ಅರ್ಥಗರ್ಭಿತ ಪದ್ಯದೊಂದಿಗೆ ಆರಂಭವಾಗಿ, ಮತ್ತೊಂದರೊಂದಿಗೆ ಮುಕ್ತಾಯವಾದ ಧಾರಾವಾಹಿ ಅತ್ಯಂತ ಆಪ್ತವೆನಿಸಿತು. ಆದರೂ ಕಡೆಯ ಕಂತು ಅವಸರದಲ್ಲಿ ಮುಗಿಸಿದ ಹಾಗೆನಿಸಿತು.

—ನಳಿನಿ ಬಿ.ಎಸ್.

### ಇನ್ನೊಂದು ಕಥೆ ಬರಲಿ

ತುಂಬ ಒಳ್ಳೆಯ ಕಥೆ. ಬೇಗನೆ ಮುಗಿದರೂ ಮನೋಜ್ಞವಾಗಿತ್ತು. ಮುಂದೆ ಇನ್ನೊಂದು ಕಥೆಯನ್ನು ವಸುಮತಿ ಉಡುಪ ಅವರು ಕೊಡಲಿ.

—ರಾಮನಾಥ್, ಬೆಂಗಳೂರು

### ತುದಿಗಾಲಿನಲ್ಲಿ ನಿಲ್ಲಿಸಿತ್ತು

ವಾರದಿಂದ ವಾರಕ್ಕೆ ಆಸಕ್ತಿ ಮೂಡಿಸಿದ್ದ ಧಾರಾವಾಹಿ ಮುಕ್ತಾಯಗೊಂಡಿದ್ದು ಬೇಸರ ತರಿಸಿದೆ. ಪ್ರತಿ ಸಂಚಿಕೆಯನ್ನು ತುದಿಗಾಲಿನಲ್ಲಿ ಕಾಯುವಂತೆ ಮಾಡಿತ್ತು. ಲೇಖಕಿಗೆ ಧನ್ಯವಾದಗಳು.

—ರುದ್ರಮೂರ್ತಿ ಆರ್.

### ಭಾಮಳ ವ್ಯಕ್ತಿತ್ವ ಅನನ್ಯ

ಮನೋಜ್ಞವಾಗಿ ಓದಿಸಿಕೊಂಡು ಹೋದ ಧಾರಾವಾಹಿ ಇಷ್ಟು ಬೇಗ ಮುಗಿಯಿತೇ ಅಂತ ಅನ್ನಿಸಿತು. ಕಾದಂಬರಿಯಲ್ಲಿ ಬರುವ ಚಿದಾನಂದ, ಸತ್ಯಭಾಮ, ಭಾರ್ಗವ, ಶೀಲಾ ಈ ಪಾತ್ರಗಳ ವ್ಯಕ್ತಿತ್ವ ನಿರೂಪಣೆ ಸಹಜವಾಗಿದೆ. ಜೀವನದಿಂದ ಆರಿಸಿ ತೆಗೆದಂತೆ ಇದೆ. ಸತ್ಯಭಾಮ ಅಪ್ಪನನ್ನು ಅನುಮಾನಿಸುವ ವಯಸ್ಸಿನಿಂದ ಮೊದಲ್ಗೊಂಡು, ಜೀವನದ ಅನುಭವಗಳಿಂದ ಮಾಗಿ, ಕೊನೆಗೆ ಅಪ್ಪನನ್ನು ಒಪ್ಪಿಕೊಳ್ಳುವ, ತನ್ನ ಬಳಿಯೇ ಇರಿಸಿಕೊಳ್ಳುವ ಪರಿ ಅನನ್ಯವಾಗಿದೆ.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

### ನಿರ್ಧಾರ ಶ್ಲಾಘನೀಯ

ಧಾರಾವಾಹಿ ಮನಮುಟ್ಟುವಂತಿತ್ತು. ತನ್ನ ಅಪ್ಪನನ್ನು ಧಿಕ್ಕರಿಸಿ ಅಂತರ್ಜಾತಿ ವಿವಾಹವಾಗಿ ಮಾನಸಿಕ ಯಾತನೆ ಅನುಭವಿಸಿ, ಸುಗಮ ಬದುಕು ಕಂಡುಕೊಂಡ ಭಾಮ ತನ್ನ ಅಪ್ಪನನ್ನು ಕರೆತರಲು ವೆಂಕಟೇಶನೊಂದಿಗೆ ಚರ್ಚಿಸಿದಾಗ, ನಾಳೆ ನಮಗೂ ಇಂತಹ ಸ್ಥಿತಿ ಬರಬಹುದು, ನಾಳೆ ನಮ್ಮ ಮಗಳು ನಮ್ಮನ್ನು ನೋಡಿಕೊಳ್ಳಬೇಕು, ನಾವು ಅವರಿಗೆ ಮೇಲ್ಪಂಕ್ತಿ ಆಗಬೇಕೆ ಹೊರತು ತಪ್ಪು ಮಾದರಿ ಆಗಬಾರದು, ವೆಂಕಟೇಶನ ಈ ಉದಾತ್ತ ಮಾತುಗಳಿಂದ ಭಾಮಾಳ ಹೃದಯ ತುಂಬಿ ಬಂದು ತನ್ನ ತಂದೆಯನ್ನು ಕರೆತರುವ ನಿರ್ಧಾರ ಮಾಡಿದ್ದು ಶ್ಲಾಘನೀಯ.

—ಎಂ. ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ

### ಸುಂದರ ಸಾಂಸಾರಿಕ ಕಥಾಹಂದರ

ಧಾರಾವಾಹಿ ಸರಳ ಹಾಗೂ ಸುಂದರ ಕಥಾಹಂದರವನ್ನು ಹೊಂದಿತ್ತು. ಸಂಸಾರದಲ್ಲಿ ಸಂಭವಿಸುವ ಘಟನೆಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಮಾವನನ್ನು ಕೊನೆಯವರೆಗೂ ತಮ್ಮ ಮನೆಯಲ್ಲಿ ಇರಿಸಿಕೊಳ್ಳುವ ಧಾರಾಳ ಮನಸ್ಸಿನ ವೆಂಕಟೇಶನಂಥ ಅಳಿಯ ನಿಜಜೀವನದಲ್ಲಿ ಸಿಕ್ಕರೆ ಎಷ್ಟು ಚೆನ್ನಾಗಿರುತ್ತದೆ ಎಂದು ಅನ್ನಿಸಿತು. ಧಾರಾವಾಹಿ ಇಷ್ಟು ಬೇಗ ಮುಗಿದಿದ್ದು ಬೇಸರವಾಯಿತು.

—ಸವಿತಾ ಕೆ.ಎಸ್.

### ಮನೋಜ್ಞ ಧಾರಾವಾಹಿ

ನಾನು ಓದುವುದಲ್ಲದೆ ಈ ಧಾರಾವಾಹಿಯನ್ನು ನನ್ನ ಪತ್ನಿ ಕೂಡ ಓದುವ ಹಾಗೆ ಮಾಡಿತು. ಧಾರಾವಾಹಿ ಮನೋಜ್ಞವಾಗಿ ಮೂಡಿಬಂದಿದೆ. ವಸುಮತಿ ಉಡುಪ ಅವರು ನನ್ನ ನೆಚ್ಚಿನ ಲೇಖಕಿ. ಈ ಕಾಲದಲ್ಲಿ ಹೆಚ್ಚಿನ ಮನೆಗಳಲ್ಲಿ ವಯಸ್ಸಾದ ತಂದೆ ತಾಯಿಗಳನ್ನು ಸಾಕುವುದೇ ವಿರಳವಾಗಿದೆ. ಅಂಥದ್ದರಲ್ಲಿ ಮಗಳು ಬೇಸರಿಸದೆ ಅಪ್ಪನನ್ನು ನೋಡಿಕೊಳ್ಳುತ್ತಾಳೆ.

—ಪಿ.ಹೆಚ್. ಪಾಟೀಲ್, ರಾಣೆಬೆನ್ನೂರು

### ಒಂದು ಹಿಡಿ ಪ್ರೀತಿ...

ಬಹಳ ದಿನಗಳ ನಂತರ ವಾರ ವಾರವೂ ಕಾತರದಿಂದ ಧಾರಾವಾಹಿ ಓದಲು ಕಾಯುತ್ತಿದ್ದ ಅನುಭವ ಮುದ ನೀಡಿತು.ಕಥೆಯನ್ನು ಎಲ್ಲಿಯೂ ಎಳೆದಾಡದೆ, ಪಾತ್ರಗಳನ್ನು ಅತಿರೇಕಗೊಳಿಸದೆ, ಆಧುನಿಕ ಕುಟುಂಬದ ಹೃದಯ ಪಲ್ಲಟಗಳ ಶೋಧನೆ ನಡೆಸುವಲ್ಲಿ ಲೇಖಕಿ ತಮ್ಮ ಎಂದಿನ ಮೊನಚನ್ನು ಉಳಿಸಿಕೊಂಡಿದ್ದಾರೆ. ಕಥೆಯ ಕೊನೆಯಲ್ಲಿ 'ಇಷ್ಟಕ್ಕೂ ಮನುಷ್ಯ ಮಾತ್ರರಿಗೆ ಬೇಕಾಗಿರುವುದೇನು? ಒಂದು ಹಿಡಿ ಪ್ರೀತಿ. ಅನ್ನಕ್ಕಿಂತ ಮಿಗಿಲಾದ ಶಕ್ತಿ ಇರುವ ಪ್ರೀತಿ' ಎಂಬ ಭಾಮಳ ಅನಿಸಿಕೆ, ನಾಗಾಲೋಟದ ಬೆಂಬತ್ತಿರುವ ಇಂದಿನ ಪೀಳಿಗೆಯ ಕಣ್ತೆರೆಸುವಂತಿದೆ.

—ಆರ್.ಟಿ. ಶರಣ್, ಕಲಬುರಗಿ

### ಮನಮುಟ್ಟುವಂತಿದೆ

ಸಮಕಾಲೀನ ಜ್ವಲಂತ ಸಮಸ್ಯೆಗಳಿಗೆ ಕನ್ನಡಿ ಹಿಡಿದು ಓದುಗರ ಮನಮುಟ್ಟುವಲ್ಲಿ ಸಫಲವಾಗಿದೆ.

—ಆರ್.ವಿ. ಭಟ್ಟ, ಹಿಂಡಲಗಾ, ಬೆಳಗಾವಿ

### 'ಮಗಳು' ನೆನಪಿಗೆ ಬಂದಳು

ಇಳಿವಯಸ್ಸಿನ ತಂದೆ ತಾಯಿಗಳಿಗೆ ಮಗಳ ಮನೆಯೇ ತಂಗುದಾಣ ಎಂಬುದಕ್ಕೆ ಚಿದಾನಂದನ ಜೀವನವೇ ಸಾಕ್ಷಿ. ಚಿದಾನಂದ ಸಾಲಿಯವರ 'ಮಗಳು' ಕವನ ನೆನಪಿಗೆ ಬರುತ್ತದೆ.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

### ಮನುಷ್ಯ ಸಂಬಂಧಗಳ ಅನಾವರಣ

ಧಾರಾವಾಹಿ ಕೊನೆಯ ಕಂತಿನಲ್ಲಿ ಗಳಗಳನೆ ಅಳುವಂತೆ ಮಾಡಿಬಿಟ್ಟಿತು. ಮನುಷ್ಯ ಸಂಬಂಧಗಳ ಅನಾವರಣ ಎಷ್ಟು ಚೆನ್ನಾಗಿತ್ತೆಂದರೆ ವಸುಮತಿ ಉಡುಪರಿಗೆ ಮಾತ್ರ ಸಾಧ್ಯವೇನೋ ಇಂತಹ ಬರವಣಿಗೆ ಎನಿಸಿತು.

—ಎಂ. ಗೀತಾ, ಶಿವಮೊಗ್ಗ

### ಕಗ್ಗದ ಸಾಲು ಮನಸೆಳೆಯಿತು

ಧಾರಾವಾಹಿ ಮನಸೆಳೆಯಿತು. ಮಗಳ ಸಾರ್ಥಕ ಭಾವ ಮನಸೆಳೆಯಿತು. ಹೀಗೆಯೇ ಅಲ್ಲವೇ ಬದುಕು. ಅಂತ್ಯದ ಕಗ್ಗ ಸಾಲುಗಳು ಇಡೀ ಧಾರಾವಾಹಿಯನ್ನು ತಿಳಿಸಿತು.

—ವೆಂಕಟೇಶ್ ಎಂ.ಎ., ದಾವಣಗೆರೆ